ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1991.

# ವಿಶ್ವಕಲ್ಯಾಣಕಾರಿಯಾಗಲು ಸರ್ವಸ್ಮೃತಿಗಳಿಂದ ಸಂಪನ್ನವಾಗಿ ಸರ್ವರಿಗೂ ಸಹಯೋಗವನ್ನು ಕೊಡಿ.

(विश्व कल्याणकारी बनने के लिए सर्व स्मृतियों से सम्पन्न बन सर्व को सहयोग दो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸದಾ ವಿಶ್ವಕಲ್ಯಾಣಕಾರಿ ಅವ್ಯಕ್ತ ಬಾಪ್‌ದಾದಾ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಸಮರ್ಥ ತಂದೆ ತನ್ನ ಸ್ಮೃತಿ ಸ್ವರೂಪ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ ವಿಶ್ವದಲ್ಲಿ ಇರುವ ದೇಶವಿದೇಶ ಮಕ್ಕಳೆಲ್ಲರೂ ಸ್ಮೃತಿ ದಿನೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಈ ಸ್ಮೃತಿ ದಿನೋತ್ಸವ ಮಕ್ಕಳಿಗೆ ತಮ್ಮ ಬ್ರಾಹ್ಮಣ ಜೀವನ ಅರ್ಥಾತ್ ಸಮರ್ಥ ಜೀವನದ ಸ್ಮೃತಿಯನ್ನು ಮಾಡಿಸುತ್ತದೆ. ಏಕೆಂದರೆ ಬ್ರಹ್ಮಾ ತಂದೆಯ ಜೀವನ ಕಥೆಯಲ್ಲಿ ಮಕ್ಕಳ ಜೀವನ ಕಥೆಯು ಇದೆ ನಿರಾಕಾರ ತಂದೆ ಸಾಕಾರ ಬ್ರಹ್ಮಾ ತಂದೆಯಿಂದ ಬ್ರಾಹ್ಮಣರನ್ನು ರಚಿಸಿದರು ಆಗಲೇ ಬ್ರಾಹ್ಮಣರಿಂದ ಅವಿನಾಶಿ ಯಜ್ಞ ರಚಿಸಲ್ಪಟ್ಟಿತು ಬ್ರಹ್ಮಾ ತಂದೆ ಬ್ರಾಹ್ಮಣರಾದ ನಿಮ್ಮೊಂದಿಗೆ ಸ್ಥಾಪನೆಗೆ ನಿಮಿತ್ತರಾದರು ಆದ್ದರಿಂದ ಬ್ರಹ್ಮಾ ತಂದೆಯೊಂದಿಗೆ ಆದಿ ಬ್ರಾಹ್ಮಣಾತ್ಮರಿಗೂ ಕೂಡ ಜೀವನ ಕಥೆ ಇದೆ. ಯಜ್ಞ ಸ್ಥಾಪನೆಯಲ್ಲಿ ಆದಿದೇವ್ ಬ್ರಹ್ಮ ಮತ್ತು ಆದಿ ಬ್ರಾಹ್ಮಣರು ಇಬ್ಬರಿಗೂ ಮಹತ್ವವಿದೆ. ಅನಾದಿ ತಂದೆ ಆದಿ ಬ್ರಹ್ಮನಿಂದ ಆದಿ ಬ್ರಾಹ್ಮಣರನ್ನು ರಚಿಸಿದರು ಮತ್ತು ಆದಿ ಬ್ರಾಹ್ಮಣರು ಅನೇಕ ಬ್ರಾಹ್ಮಣರನ್ನು ವೃದ್ಧಿ ಮಾಡಿದರು. ಸ್ಥಾಪನೆಯ ಕಥೆಯನ್ನು, ಬ್ರಹ್ಮಾ ತಂದೆಯ ಕಥೆಯನ್ನು ಈ ಸ್ಮೃತಿ ದಿನದಂದು ವರ್ಣನೆ ಮಾಡುತ್ತಿದ್ದೀರಿ. ಕೇವಲ ಬ್ರಹ್ಮಬಾಬಾ ರವರನ್ನೇ ನೆನಪು ಮಾಡುತ್ತಿದ್ದೀರಾ ಅಥವಾ ಬ್ರಹ್ಮಾ ತಂದೆಯಿಂದ ಬಾಬಾ ಯಾವ ಸ್ಮೃತಿಯನ್ನು ಕೊಟ್ಟಿದ್ದಾರೆಯೋ ಅಥವಾ ಎಷ್ಟು ಸ್ಮೃತಿಗಳನ್ನು ಮಾಡಿಸಿದ್ದಾರೆಯೋ ಅಷ್ಟೂ ಜ್ಞಾಪಕವಿದೆಯೇ? ಆದಿಯಿಂದ ಇಲ್ಲಿಯವರೆಗೆ ಯಾವ ಯಾವ ಮತ್ತು ಎಷ್ಟು ಸ್ಮೃತಿಗಳನ್ನು ಕೊಟ್ಟಿದ್ದಾರೆಯೋ ನೆನಪಿದೆಯೇ. ಅಮೃತ ವೇಳೆಯಿಂದ ರಾತ್ರಿಯವರೆಗೆ

ಇರುವ ಸರ್ವಸ್ಮೃತಿಗಳನ್ನು ಎದುರಿಗೆ ತಂದುಕೊಳ್ಳಿರಿ ಒಂದು ದಿನದಲ್ಲಿ ಪೂರ್ತಿ ಆಗುತ್ತವೆ. ದೊಡ್ಡ ಲಿಸ್ಟ್ ಇದೆ ತಾನೇ ಸ್ಮೃತಿ ಸಪ್ತಾಹ ನಡೆಸಿದರು ಕೂಡ ಇನ್ನೂ ಹೆಚ್ಚು ವಿಸ್ತಾರವಿರುತ್ತದೆ! ಏಕೆಂದರೆ ಕೇವಲ ರಿವೈಸ್ ಮಾಡುವುದೇ ಅಲ್ಲ ಅನುಭವ ಮಾಡಿಕೊಳ್ಳುತ್ತಿದ್ದೀರಿ. ಆದ್ದರಿಂದಲೇ ಸ್ಮೃತಿ ಸ್ವರೂಪ ಎಂದು ಕರೆಯುತ್ತಾರೆ. ಸ್ವರೂಪ ಅರ್ಥಾತ್ ಪ್ರತಿಸ್ಮೃತಿಯ ಅನುಭವವಾಗುವುದು. ನೀವು ಸ್ಮೃತಿ ಸ್ವರೂಪರಾಗಿ ತಯಾರಾಗುತ್ತಿದ್ದೀರಿ ಭಕ್ತರು ಕೇವಲ ಸ್ಮರಣೆ ಮಾಡುತ್ತಿದ್ದಾರೆ. ಏನೇನು ಸ್ಮೃತಿಗಳನ್ನು ಅನುಭವ ಮಾಡಿಕೊಂಡಿದ್ದೀರೋ ಅವುಗಳ ವಿಸ್ತಾರ ಬಹಳ ದೊಡ್ಡದು ತಂದೆಯ ಪರಿಚಯ ಬಹಳ ದೊಡ್ಡದು ಆದರೆ ನೀವು ಕ್ಲುಪ್ತವಾಗಿ ಐದು ವಿಷಯಗಳಲ್ಲಿ ಪರಿಚಯವನ್ನು ಕೊಡುತ್ತೀರಿ ತಾನೆ. ಅದೇ ರೀತಿಯಾಗಿ ಆದಿಯಿಂದ ಅಂತಿಮದವರೆಗೆ ತಂದೆಯು ತಿಳಿಸಿರುವ ಸ್ಮೃತಿಯ ವಿಸ್ತಾರವನ್ನು ಕೂಡ ಐದು ವಿಷಯಗಳಲ್ಲಿ ಸಾರರೂಪದಲ್ಲಿ ತನ್ನಿರಿ. ಎಷ್ಟು ಹೆಸರುಗಳಿರುತ್ತವೆ, ವಿಸ್ತಾರವಾಗಿರುತ್ತವೆ ತಾನೆ ಒಂದೊಂದು ಹೆಸರನ್ನು ಸ್ಮೃತಿ ಮಾಡಿ ಮತ್ತು ಸ್ವರೂಪವಾಗಿ ಅನುಭವ ಮಾಡಿಕೊಳ್ಳಿರಿ ಕೇವಲ ರಿಪೀಟ್ ಮಾಡುವುದಲ್ಲ, ಸ್ಮೃತಿ ಸ್ವರೂಪವಾಗುವ ಆನಂದ ಅತೀತವಾದುದು ಮತ್ತು ಪ್ರಿಯವಾದದ್ದು. ಪರಮಾತ್ಮನ ಮಕ್ಕಳಾದ ನಿಮಗೆ ನೀವು ನನ್ನ ನಯನ ರತ್ನಗಳು ಎಂಬ ಸ್ಮೃತಿಯನ್ನು ಮಾಡಿಸುತ್ತಿದ್ದಾರೆ ನೀವು ಬಾಬಾರವರ ಕಣ್ಣಿನ ಬೆಳಕಾಗಿದ್ದೀರಿ(ಪ್ರಕಾಶ) ಬೆಳಕಿನ ವಿಶೇಷತೆ ಏನು? ಬೆಳಕಿನ ಕರ್ತವ್ಯವೇನು? ಕಣ್ಣಿನ ಪ್ರಕಾಶತೆಗೆ ಎಷ್ಟು ಶಕ್ತಿ ಇರುತ್ತದೆ ಇಂತಹ ಅನುಭವಗಳನ್ನು ಮಾಡಿಕೊಳ್ಳಿ ಅರ್ಥಾತ್ ಸ್ಮೃತಿ ಸ್ವರೂಪರಾಗಿರಿ. ಇದೇ ರೀತಿ ಪ್ರತಿ ಹೆಸರಿನ ಸ್ಮೃತಿಯನ್ನು ಅನುಭವ ಮಾಡಿಕೊಳ್ಳುತ್ತಾ ಇರಿ. ಉದಾಹರಣೆಗಾಗಿ ಇದೊಂದನ್ನು ತಿಳಿಸಿದ್ದೇನೆ ಹೀಗೆ ಶ್ರೇಷ್ಠ ರೂಪದ ಸ್ಮೃತಿಗಳು ಎಷ್ಟಿವೆ? ಬ್ರಾಹ್ಮಣರಾದ ನೀವು ನಿಮಗೆ ಎಷ್ಟು ರೂಪಗಳು ಇವೆ ತಂದೆಯ ರೂಪಗಳೇ ನಿಮ್ಮ ರೂಪಗಳು. ಆ ಎಲ್ಲಾ ರೂಪಗಳ ಸ್ಮೃತಿಯನ್ನು ಅನುಭವ ಮಾಡಿಕೊಳ್ಳಿರಿ. ನಾಮರೂಪ ಗುಣಗಳು ಆದಿ ಅನಾದಿ ಮತ್ತು ಈಗಿನ ಬ್ರಾಹ್ಮಣ ಜೀವನದ ಸರ್ವಗುಣ ಸ್ಮೃತಿ ಸ್ವರೂಪರಾಗಿರಿ.

ಹಾಗೆಯೇ ಕರ್ತವ್ಯ - ಎಷ್ಟು ಶ್ರೇಷ್ಠ ಕರ್ತವ್ಯಕ್ಕೆ ನಿಮಿತ್ತ ರಾಗಿದ್ದೀರಿ. ಆ ಕರ್ತವ್ಯಗಳ ಸ್ಮೃತಿಯನ್ನು ಪ್ರತ್ಯಕ್ಷ ಮಾಡಿರಿ ಐದನೇ ವಿಷಯ ಬಾಪ್‌ದಾದಾ ನಿಮ್ಮ ಅನಾದಿ ಆದಿ ದೇಶದ ಸ್ಮೃತಿಯನ್ನು ಮಾಡಿಸುತ್ತಿದ್ದಾರೆ ದೇಶದ ಸ್ಮೃತಿಯಿಂದ ಮನೆಗೆ ಹಿಂತಿರುಗಿ ಹೋಗುವ ಸಮರ್ಥತೆ ಬಂದಿತು. ನಿಮ್ಮ ರಾಜ್ಯದಲ್ಲಿ ರಾಜ್ಯಾಧಿಕಾರಿಯಾಗುವ ಧೈರ್ಯವು ಬಂದಿತು ಮತ್ತು ವರ್ತಮಾನ ಸಂಗಮಯುಗೀ ಬ್ರಾಹ್ಮಣ ಪ್ರಪಂಚದಲ್ಲಿ ಸಂತೋಷದಿಂದ ಜೀವನ ನಡೆಸುವ ಕಲೆ ಸ್ಮೃತಿಯಲ್ಲಿ ಬಂದಿತು. ಜೀವಿಸುವ ಕಲೆ ಚೆನ್ನಾಗಿ ಬಂದಿದೆ ತಾನೇ ಪ್ರಪಂಚ ಸಾಯುವ ಕಲೆಯಲ್ಲಿ ವೇಗವಾಗಿ ಹೋಗುತ್ತಿದೆ ಮತ್ತು ಬ್ರಾಹ್ಮಣರಾದ ನೀವು ಸುಖಮಯವಾಗಿ ಖುಷಿಯಿಂದ ಜೀವನ ನಡೆಸುವ ಕಲೆಯಲ್ಲಿ ಹಾರುತ್ತಿದ್ದೀರಿ. ಎಷ್ಟು ಅಂತರವಿದೆ.

ಸ್ಮೃತಿ ದಿನೋತ್ಸವ ಅರ್ಥಾತ್ ಸರ್ವಸ್ಮೃತಿಗಳ ಆತ್ಮಿಕ ನಶೆಯನ್ನು ಅನುಭವ ಮಾಡಿಕೊಳ್ಳುವುದು. ಈ ಸ್ಮೃತಿ ದಿನೋತ್ಸವದಂದು ಪ್ರಪಂಚದವರಂತೆ ನಮ್ಮ ಬ್ರಹ್ಮಾ ತಂದೆ ಈ ರೀತಿ ಇರುತ್ತಿದ್ದರು, ಅವರು ಈ ರೀತಿ ಹೇಳುತ್ತಿದ್ದರು ಇದನ್ನು ಮಾಡಿದ್ದರು ಎಂದು ಹೇಳುತ್ತಿಲ್ಲ ತಾನೇ. ಪ್ರಪಂಚದಲ್ಲಿರುವವರಾದರೆ ಅವರು ಹೀಗಿರುತ್ತಿದ್ದರು .... ಹೀಗೆ ಎಂದು ಹೇಳುತ್ತಾ ದುಃಖದ ಅಲೆಯನ್ನು ವ್ಯಾಪಿಸುತ್ತಿರುತ್ತಾರೆ. ಆದರೆ ಬ್ರಾಹ್ಮಣಾತ್ಮರಾದ ನೀವು ನಿಮ್ಮ ವಿಶೇಷತೆ ಏನೆಂದರೆ ಬ್ರಹ್ಮತಂದೆ ಈಗಲೂ ಕೂಡ ನಮ್ಮ ಜೊತೆಯೇ ಇದ್ದಾರೆ ಎಂದು ಹೇಳುತ್ತೀರಿ ಜೊತೆಯನ್ನು ಅನುಭವ ಮಾಡಿಕೊಳ್ಳುತ್ತಿದ್ದೀರಿ ನಿಮ್ಮಲ್ಲಿ ಈ ವಿಶೇಷತೆ ಇದೆ. ಬ್ರಹ್ಮತಂದೆ ಹೋಗಿ ಬಿಟ್ಟಿದ್ದಾರೆ ಎಂದು ನೀವು ಹೇಳುವುದಿಲ್ಲ. ಜೊತೆಯೇ ಇರುತ್ತೇನೆ ಜೊತೆಗೆ ಹೋಗುತ್ತೇನೆ ಎಂಬ ಪ್ರತಿಜ್ಞೆಯನ್ನು ಮಾಡಿದ್ದರು. ಮತ್ತೆ ಹಾಗಿದ್ದಾಗ ಆದಿ ಆತ್ಮನೇ ಪ್ರತಿಜ್ಞೆಯನ್ನು ಉಳಿಸಿಕೊಳ್ಳಲಿಲ್ಲವೆಂದರೆ ಇನ್ಯಾರು ಉಳಿಸಿಕೊಳ್ಳುವರು? ಕೇವಲ ರೂಪ ಮತ್ತು ಸೇವೆಯ ವಿಧಿ ಮಾತ್ರ ಬದಲಾಗಿದೆ ಅಷ್ಟೇ ನಿಮ್ಮೆಲ್ಲರ ಲಕ್ಷ್ಯ ಅಥವಾ ಗುರಿ ಫರಿಶ್ತಾ ನಿಂದ ದೇವತೆ ಆದ್ದರಿಂದ ಫರಿಶ್ತಾರೂಪಕ್ಕೆ ಉದಾಹರಣೆಯಾಗಿ ಬ್ರಹ್ಮಾ ತಂದೆ ತಯಾರಾದರು ಈಗಲೂ ಬ್ರಹ್ಮಾ ತಂದೆಯಿಂದ ಮಕ್ಕಳೆಲ್ಲರ ಪಾಲನೆಯಾಗುತ್ತಿದೆ. ಆದ್ದರಿಂದಲೇ ಬ್ರಹ್ಮಕುಮಾರಿ ಬ್ರಹ್ಮಕುಮಾರರು ಎಂದು ಕರೆಯಿಸಿಕೊಳ್ಳುತ್ತಿದ್ದೀರಿ ಅರ್ಥವಾಯಿತೇ? ಸ್ಮೃತಿದಿನೋತ್ಸವದ ಮಹತ್ವವೇನು ಎಂದು ತಿಳಿಯಿತೆ? ಈ ಸ್ಮೃತಿಗಳಲ್ಲಿ ಸದಾ ಲವಲಿನವಾಗಿ ಇರಿ ಇದನ್ನೇ ತಂದೆಯ ಸಮಾನವಾಗುವ ಅನುಭವ

ಎಂದು ಕರೆಯುತ್ತಾರೆ. *ನೀವು ತಂದೆ ಸಮಾನವಾಗಿ ಅನುಭವ ಮಾಡಿಕೊಳ್ಳುತ್ತಿದ್ದೀರಿ. ಸಮಾನವೆಂಬ ಈ ಮಾತನ್ನೇ ಭಕ್ತರು ಲೀನವಾಗುವುದಂತೆ ಹೇಳಿದ್ದಾರೆ ಆತ್ಮ ಪರಮಾತ್ಮನಲ್ಲಿ ಲೀನವಾಗುವುದಿಲ್ಲ ಆದರೆ ಸಮಾನವಾಗಿ ತಯಾರಾಗುತ್ತದೆ.* ಮಕ್ಕಳೆಲ್ಲರೂ ತಮ್ಮ ತಮ್ಮ ಹೆಸರಿನೊಂದಿಗೆ ಸ್ಮೃತಿ ದಿನೋತ್ಸವದ ಸ್ಮೃತಿಯನ್ನು ಕಳುಹಿಸಿದ್ದಾರೆ. ಕೆಲವರು ಸಂದೇಶಿಯಾಗಿ ಪ್ರಿಯ ಸ್ಮೃತಿಗಳನ್ನು ತಂದಿದ್ದಾರೆ. ಪ್ರತಿಯೊಬ್ಬರು ನನ್ನ ಸ್ಮೃತಿ ವಿಶೇಷವಾಗಿ ತಲುಪಿಸಿರಿ ಎಂದು ಕೇಳುತ್ತಿದ್ದಾರೆ. ಒಬ್ಬೊಬ್ಬರಿಗೆ ಬೇರೆ ಬೇರೆಯಾಗಿ ಸ್ಮೃತಿಪತ್ರಗಳನ್ನು ಬರೆಯುವ ಬದಲು ಮನಸ್ಸಿನಿಂದ ಉತ್ತರವನ್ನು ಬರೆಯುತ್ತಿದ್ದಾರೆ. ಪ್ರತಿಯೊಬ್ಬರ ಮನಸ್ಸಿನ ಪ್ರೀತಿ ಬಾಪ್‌ದಾದಾರವರ ನಯನಗಳಲ್ಲಿ, ಮನಸ್ಸಿನಲ್ಲಿ ಸಮಾವೇಶವಾಗಿ ಇದೆ ಮತ್ತು ಈಗ ಇನ್ನಷ್ಟು ವಿಶೇಷವಾಗಿ ತುಂಬಿಕೊಂಡಿದೆ. ವಿಶೇಷವಾಗಿ ನೆನಪು ಮಾಡುವವರನ್ನು ಬಾಪ್‌ದಾದಾ ಈಗಲೂ ಕೂಡ ಪ್ರತ್ಯಕ್ಷವಾಗಿವಾಗಿಸಿಕೊಂಡು ವಿಶೇಷ ಪ್ರಿಯಸ್ಮೃತಿಗಳನ್ನು ಕೊಡುತ್ತಿದ್ದಾರೆ. ಪ್ರತಿಯೊಬ್ಬರ ಮನಸ್ಸಿನ ಉಲ್ಲಾಸ ಮನಸ್ಸಿನ ಆತ್ಮಿಕ ಸಂಭಾಷಣೆ ಮನಸ್ಸಿನ ಪರಿಸ್ಥಿತಿ ಹೃದಯರಾಮನಾದ ತಂದೆಯ ಹತ್ತಿರ ತಲುಪುತ್ತಿದೆ. ಬಾಪ್‌ದಾದಾ ಮಕ್ಕಳೆಲ್ಲರಿಗೂ ಇದೇ ಸ್ಮೃತಿಯನ್ನು ಮಾಡಿಸುತ್ತಿದ್ದಾರೆ ಸದಾ ಹೃದಯಕ್ಕೆ ಜೊತೆಯಾಗಿ, ಸೇವೆಯಲ್ಲಿ ಜೊತೆಯಾಗಿ ಮತ್ತು ಸ್ಥಿತಿಯಲ್ಲಿ ಸದಾ ಸಾಕ್ಷಿಯಾಗಿ ಇರಬೇಕು. ಸದಾ ಮಾಯಾಜಿತ್ ನ ಪತಾಕೆ(ಜಂಡ) ಹಾರಿಸುತ್ತಾ ಇರಬೇಕು. ಮಕ್ಕಳೆಲ್ಲರಿಗೂ ಹೊಸದೇನು ಅಲ್ಲ ಎಂಬ ಪಾಠವನ್ನು ಪ್ರತಿಯೊಂದು ಪರಿಸ್ಥಿತಿಯಲ್ಲಿ ಸದಾ ಸ್ಮೃತಿಯಲ್ಲಿರಬೇಕು. ಬ್ರಾಹ್ಮಣ ಜೀವನ ಅರ್ಥಾತ್ ಪ್ರಶ್ನಾರ್ಥಕ ಮತ್ತು ಆಶ್ಚರ್ಯಾರ್ಥಕ ಇರಬಾರದು. ಎಷ್ಟು ಬಾರಿ ಸಮಾಚಾರವನ್ನು ಕೇಳಿರುತ್ತೀರೋ ತಾನೇ. ಹೊಸ ಸಮಾಚಾರವೇ ಅಲ್ಲ ಬ್ರಾಹ್ಮಣ ಜೀವನ ಅರ್ಥಾತ್ ಪ್ರತಿಯೊಂದು ಸಮಾಚಾರವನ್ನು ಕೇಳುತ್ತರಲೂ ಕಲ್ಪಪೂರ್ವದ ಸ್ಮೃತಿಯಲ್ಲಿ ಸಮರ್ಥವಾಗಿ ಇರಬೇಕು. ಏನು ನಡೆಯಬೇಕಾಗಿತ್ತೋ ಅದು ನಡೆಯುತ್ತದೆ. ಆದ್ದರಿಂದ ಏನಾಗುತ್ತದೆಯೋ ಎಂಬ ಪ್ರಶ್ನೆ ಇರಬಾರದು, ಬರಬಾರದು. ತ್ರಿಕಾಲದರ್ಶಿಗಳು ಡ್ರಾಮಾದ ಆದಿ-ಮದ್ಯ-ಅಂತ್ಯಗಳನ್ನು ತಿಳಿದವರು. ಹಾಗಿದ್ದಾಗ ವರ್ತಮಾನದ ಬಗ್ಗೆ ತಿಳಿಯುತ್ತಿಲ್ಲವೇ? ಭಯಪಡುತ್ತಿಲ್ಲ ತಾನೇ ಬ್ರಾಹ್ಮಣ ಜೀವನದಲ್ಲಿ ಪ್ರತಿ ಹೆಜ್ಜೆಯಲ್ಲಿ ಕಲ್ಯಾಣವಿರುತ್ತದೆ ಭಯಪಡುವ ಅವಶ್ಯಕತೆ ಇಲ್ಲ. **ನಿಮ್ಮೆಲ್ಲರ ಕರ್ತವ್ಯವೇನೆಂದರೆ, ನಿಮ್ಮ ಶಾಂತಿಯ ಶಕ್ತಿಯಿಂದ ಅಶಾಂತಿ ಆತ್ಮರಿಗೆ ಶಾಂತಿಯ ಕಿರಣಗಳನ್ನು ಕೊಡಿ** ನಿಮ್ಮ ಸಹೋದರಿ ಸಹೋದರರೇ ಆದ್ದರಿಂದ ಈಶ್ವರೀಯ ಪರಿವಾರದ ಸಂಬಂಧದಿಂದ ಸಹಯೋಗಿಯಾಗಿರಿ ಯುದ್ಧ ಎಷ್ಟು ತೀವ್ರವಾಗಿ ಇದೆಯೋ ಅಷ್ಟು ನಿಮ್ಮ ಯೋಗಿ ಆತ್ಮರ ಯೋಗ ಅವರಿಗೆ ಶಾಂತಿಯ ಸಹಯೋಗವನ್ನು ಕೊಡುತ್ತದೆ ಆದ್ದರಿಂದ **ವಿಶೇಷ ಸಮಯವನ್ನು ನಿಗದಿಪಡಿಸಿ ಶಾಂತಿಯ ಸಹಯೋಗವನ್ನು ಕೊಡಿ ಇದೇ ಬ್ರಾಹ್ಮಣಾತ್ಮರಾದ ನಿಮ್ಮ ಕರ್ತವ್ಯ**, ಒಳ್ಳೆಯದು.

ಸರ್ವಸ್ಮೃತಿ ಸ್ವರೂಪ ಶ್ರೇಷ್ಠಾತ್ಮರಿಗೆ, ತಂದೆಯ ಸಮಾನವಾಗುವ ಲಕ್ಷ್ಯ ಮತ್ತು ಲಕ್ಷಣಗಳನ್ನು ಧಾರಣೆ ಮಾಡುವ ಆತ್ಮರಿಗೆ, ಸದಾ ಸ್ವಯಂ ಅನ್ನು ತಂದೆಯೊಂದಿಗೆ ಅನುಭವ ಮಾಡಿಕೊಳ್ಳುವ ಸಮೀಪ ಆತ್ಮರಿಗೆ, ಸದಾ ಹೊಸದೇನಲ್ಲ ಎಂಬ ಪಾಠವನ್ನು ಸ್ವರೂಪದಲ್ಲಿ ತರುವವರಿಗೆ, ಸದಾ ವಿಶ್ವಕಲ್ಯಾಣಕಾರಿಯಾಗಿ ವಿಶ್ವಾತ್ಮರಿಗೆ ಸಹಯೋಗವನ್ನು ಕೊಡುವವರಿಗೆ, ಸದಾ ವಿಜಯೀ ರತ್ನಗಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.

**"ಅವ್ಯಕ್ತ ಮಹಾವಾಕ್ಯ - ಪಾರ್ಟಿಗಳ ಜೊತೆ"**

1) ಗ್ರೂಪ್ ನಂ-1 ನಿಶ್ಚಯ ಬುದ್ಧಿ ವಿಜಯೀ ಆತ್ಮರಾಗಿದ್ದೀರಿ ಎಂಬ ಅನುಭವ ಮಾಡುತ್ತೀರಿ

ಅಲ್ಲವೇ? ಸದಾ ನಿಶ್ಚಯ ಅಟಲ ಆಗಿರುತ್ತದೆಯೇ? ಅಥವಾ ಎಂದಾದರೂ ಏರು ಪೇರು ಆಗುತ್ತದೆಯೇ? ನಿಶ್ಚಯ ಬುದ್ಧಿಯ ಚಿಹ್ನೆ ಆಗಿದೆ ಅವರು ಎಲ್ಲಾ ಕಾರ್ಯದಲ್ಲಿ. ವ್ಯವಹಾರಿಕವೇ ಇರಲಿ, ಪಾರಮಾರ್ಥವೇ ಇರಲಿ. ಆದರೆ ಎಲ್ಲ ಕಾರ್ಯದಲ್ಲಿ ವಿಜಯದ ಅನುಭವ ಮಾಡುತ್ತಾರೆ. ಎಂತಹದೇ ಸಾಧಾರಣ ಕರ್ಮವೇ ಇರಲಿ. ಆದರೆ ವಿಜಯದ ಅಧಿಕಾರ ಅವರಿಗೆ ಅವಶ್ಯವಾಗಿ ಪ್ರಾಪ್ತಿ ಆಗುತ್ತದೆ,

ಏಕೆಂದರೆ ಬ್ರಾಹ್ಮಣ ಜೀವನದ ವಿಶೇಷ ಜನ್ಮ ಸಿದ್ಧ ಅಧಿಕಾರ ವಿಜಯ ಆಗಿದೆ. ಯಾವುದೇ ಕಾರ್ಯದಲ್ಲಿ ಸ್ವಯಂನಿಂದ ಹೃದಯವಿಧೀರ್ಣ (ಬಲಹೀನ) ಆಗಬೇಡಿ. ಏಕೆಂದರೆ ಅವರಿಗೆ ನಿಶ್ಚಯ ಇದೆ ವಿಜಯ ಜನ್ಮ ಸಿದ್ಧ ಅಧಿಕಾರ ಆಗಿದೆ. ಹಾಗಾದರೆ ಇಷ್ಟು ಅಧಿಕಾರದ ನಶೆ ಇರುತ್ತದೆಯೇ. ಯಾರಿಗೆ ಭಗವಂತ ಸಹಾಯಕ ಆಗಿದ್ದಾರೆ ಅವರ ವಿಜಯ ಆಗದಿದ್ದರೆ ಇನ್ನು ಯಾರದು ಆಗುತ್ತದೆ! ಕಲ್ಪದ ಹಿಂದಿನ ನೆನಪಾರ್ಥವೂ ಸಹ ತೋರಿಸುತ್ತಾರೆ ಎಲ್ಲಿ ಭಗವಂತ ಇರುವರೋ ಅಲ್ಲಿ ವಿಜಯ ಇದೆ. ಪಾಂಡವರು ಐವರೇ ಇದ್ದರೂ, ವಿಜಯ ಯಾರದಾಯಿತು? ಭಗವಂತ ಜೊತೆಯಲ್ಲಿರುವರು. ಅಂದ ಮೇಲೆ ಕಲ್ಪದ ಹಿಂದಿನ ನೆನಪಾರ್ಥದಲ್ಲಿ ವಿಜಯೀ ಆಗಿದ್ದಿರಿ, ಈಗಲೂ ಆಗುವಿರಿ ಅಲ್ಲವೇ? ಎಂದೂ ಯಾವ ಕಾರ್ಯದಲ್ಲಿ ಇದು ಆಗುವುದೊ, ಇಲ್ಲವೊ ಎಂಬ ಸಂಕಲ್ಪ ಬರಬಾರದು ವಿಜಯ ಆಗುವುದೊ ಅಥವಾ ಇಲ್ಲವೊ..... ಈ ಪ್ರಶ್ನೆ ಏಳುವುದಿಲ್ಲ. ತಂದೆಯ ಜೊತೆ ಇರುವವರ ಸೋಲು ಎಂದೂ ಆಗುವುದಿಲ್ಲ. ಇದು ನಿಶ್ಚಿತವಾಗಿಯೂ ಕಲ್ಪ ಕಲ್ಪದಲ್ಲಿ ನಿಗದಿ ಆಗಿದೆ. ಆದ್ದರಿಂದ ಸದಾ ವಿಜಯದ ಖುಷಿಯಲ್ಲಿ ಹಾಡುತ್ತಾ ನೃತ್ಯ ಮಾಡುತ್ತಾ ಇರಿ.

2) ಸದಾ ನಿಮ್ಮನ್ನು ನೀವು ಭಾಗ್ಯವಿಧಾತಾ ತಂದೆಯ ಭಾಗ್ಯಶಾಲಿ ಮಕ್ಕಳು - ಈ ರೀತಿ ಅನುಭವ ಮಾಡುತ್ತೀರಾ? ಪದಮಾಪದಮ್ ಭಾಗ್ಯಶಾಲಿ ಆಗಿರುವಿರೊ ಅಥವಾ ಸೌಭಾಗ್ಯಶಾಲಿ ಆಗಿರುವಿರೊ? ಇಷ್ಟು ಶ್ರೇಷ್ಠ ಭಾಗ್ಯ ಇರುವವರು ಸದಾ ಹರ್ಷಿತ ಆಗಿರುವರು ಏಕೆಂದರೆ ಭಾಗ್ಯಶಾಲಿ ಆತ್ಮರಿಗೆ ಅಪ್ರಾಪ್ತಿ ಯಾವುದೂ ಇರುವುದೇ ಇಲ್ಲ. ಆದ್ದರಿಂದ ಎಲ್ಲಿ ಸರ್ವ ಪ್ರಾಪ್ತಿಗಳಿವೆಯೋ ಅಲ್ಲಿ ಸದಾ ಸಂತೋಷ ಇದ್ದೆ ಇರುತ್ತದೆ. ಅಲ್ಪ ಕಾಲದ ಲಾಟರಿ ಸಿಕ್ಕವರ ಚಹರೆಯೂ ಸಹ ಅವರಿಗೆ ಏನೋ ಸಿಕ್ಕಿದೆ ಎನ್ನುವುದನ್ನು ಹೇಳುತ್ತದೆ. ಹಾಗಾದರೆ ಯಾರಿಗೆ ಪದಮಾಪದಮ್ ಪ್ರಾಪ್ತಿ ಆಗಿರುತ್ತದೊ ಅವರು ಹೇಗೆ ಇರುತ್ತಾರೆ? ಸದಾ ಹರ್ಷಿತ. ನೋಡಿದವರು ಏನು ಸಿಕ್ಕಿದೆ ಎಂದು ಕೇಳಬೇಕು ಅಷ್ಟು ಹರ್ಷಿತವಾಗಿರಿ. ಎಷ್ಟು ಪುರುಷಾರ್ಥದಲ್ಲಿ ಮುಂದುವರೆಯುತ್ತಾ ಹೋಗುತ್ತೀರೋ ಅಷ್ಟು ನೀವು ಮಾತನಾಡುವ ಅವಶ್ಯಕತೆ ಸಹ ಇರುವುದಿಲ್ಲ. ನಿಮ್ಮ ಚಹರೆ ನಿಮಗೆ ಏನು ಸಿಕ್ಕಿದೆ ಎನ್ನುವುದನ್ನು ಹೇಳುತ್ತದೆ, ಏಕೆಂದರೆ ಚಹರೆ ದರ್ಪಣ ಆಗಿರುತ್ತದೆ. ದರ್ಪಣದಲ್ಲಿ ವಸ್ತು ಯಾವ ರೀತಿ ಇರುತ್ತದೆಯೊ ಅದೇ ರೀತಿ ಕಾಣಿಸುತ್ತದೆ. ಹಾಗಾದರೆ ನಿಮ್ಮ ಚಹರೆ ದರ್ಪಣದ ಕೆಲಸ ಮಾಡಬೇಕು. ಇಷ್ಟೊಂದು ಆತ್ಮರಿದ್ದಾರೆ ಅವರಿಗೆ ಕುಳಿತು ಹೇಳಲು ಎಲ್ಲಾ ಸಮಯ ಇದೆ. ಸಮಯವು ಸಹ ನಾಜೂಕಾಗುತ್ತಾ ಹೋಗುತ್ತದೆ. ಅಂದ ಮೇಲೆ ಸೇವೆ ಹೇಗೆ ಆಗಬೇಕು? ನಿಮ್ಮ ಚಹರೆಯಿಂದ, ಯಾವ ರೀತಿ ಮ್ಯೂಜಿಯಮ್‌ನಲ್ಲಿ ಚಿತ್ರಗಳ ಮೂಲಕ ಸೇವೆ ಮಾಡುತ್ತೀರಿ. ಚಿತ್ರ ನೋಡಿ ಪ್ರಭಾವಿತರಾಗುತ್ತಾರೆ ಅಲ್ಲವೇ. ಹಾಗೆಯೇ ನಿಮ್ಮ ಚೈತನ್ಯ ಚಿತ್ರ ಸೇವೆ ಮಾಡಬೇಕು ಇಂತಹ ತಯಾರಾಗಿರುವ ಚಿತ್ರ ಆಗಿರುವಿರಾ? ಇಂತಹ ಚಿತ್ರಗಳು ತಯಾರಾದರೆ ಧ್ವನಿ ಮೊಳಗಿಸಿಬಿಡುವಿರಿ. ಸದಾ ಕಾಲ ನಡೆದಾಡುತ್ತಾ, ಓಡಾಡುತ್ತಾ, ಕೂಡುತ್ತಾ. ಏಳುತ್ತಾ ಇದೇ ಸ್ಮೃತಿ ಇರಲಿ ನಾವು ಚೈತನ್ಯ ಚಿತ್ರ ಆಗಿದ್ದೇವೆ. ಇಡೀ ವಿಶ್ವದ ಆತ್ಮರ ದೃಷ್ಟಿ ನಮ್ಮ ಮೇಲಿದೆ. ಚೈತನ್ಯ ಚಿತ್ರದಲ್ಲಿ ಎಲ್ಲದಕ್ಕಿಂತ ಆಕರ್ಷಕ ಮಾತು ಯಾವುದಾಗಿರುತ್ತದೆ? ಸದಾ ಖುಷಿ ಇರುತ್ತದೆ. ಹಾಗಾದರೆ ಸದಾ ಖುಷಿ ಇರುತ್ತದೊ ಅಥವಾ ಕೆಲವು ಬಾರಿ ಗೊಂದಲದಲ್ಲ ಬರುತ್ತೀರೊ? ಅಥವಾ ಅಲ್ಲಿ ಹೋಗಿ ಹೇಳುತ್ತೀರಿ - ಹೀಗಾಯಿತು ಆದ್ದರಿಂದ ಖುಷಿ ಕಡಿಮೆ ಆಯಿತು. ಏನೇ ಆದರೂ ಖುಷಿ ಕಡಿಮೆ ಆಗಬಾರದು. ಈ ರೀತಿ ಪಕ್ಕಾ ಆಗಿರುವಿರಾ? ದೊಡ್ಡ ಪರೀಕ್ಷೆ ಬಂದರೆ ಪಾಸ್ ಆಗಿಬಿಡುವಿರಾ? ಬಾಪ್‌ದಾದಾ ಹಾ ಎನ್ನುತ್ತಿರುವರೆಲ್ಲರ ಫೋಟೊ ತೆಗೆಯುತ್ತಿರುವರು. ಆ ಸಮಯದಲ್ಲಿ ಹೇಳಿಬಿಟ್ಟೆವು ಎಂದು ಹೇಳಬಾರದು. ಮಾಸ್ಟರ್ ಸರ್ವಶಕ್ತಿವಂತರಿಗೆ ಯಾವ ಮಾತೂ ದೊಡ್ಡದಲ್ಲ. ಎರಡನೇಯ ಮಾತು ನಿಶ್ಚಯ ಇದ್ದೇ ಇದೆ ಏನೆಂದರೆ ನಮ್ಮ ವಿಜಯ ಆಗಿಯೇ ಇದೆ. ಆದ್ದರಿಂದ ಯಾವ ದೊಡ್ಡ ಮಾತಲ್ಲ. ಸರ್ವ ಶಕ್ತಿಗಳ ಖಜಾನೆ ಯಾರ ಬಳಿ ಇದೆ ಅವರು ಯಾವ ಶಕ್ತಿಗೆ ಆಜ್ಞೆ ಮಾಡಿದರೂ ಆ ಶಕ್ತಿ ಸಹಾಯಕ ಆಗುತ್ತದೆ. ಆದರೆ ಆಜ್ಞೆ ಮಾಡುವವರು ಧೈರ್ಯಶಾಲಿ ಆಗಿರಬೇಕು. ಹಾಗಾದರೆ ಆಜ್ಞೆ ಮಾಡಲು ಬರುತ್ತದೆಯೇ ಅಥವಾ ಆಜ್ಞೆಯಂತೆ ನಡೆಯಲು ಬರುತ್ತದೆಯೋ? ಮಾಯೆಯ ಆಜ್ಞೆಯಂತೆ ನಡೆಯುವುದಿಲ್ಲ ತಾನೇ? ಯಾವುದಾದರೂ ಮಾತು ಬಂದು ಸಮಾಪ್ತಿ ಆಗಿ ಹೋದ ನಂತರ ಹೀಗೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ವಿಚಾರ ಮಾಡುತ್ತೀರಾ? ಈ ರೀತಿ ಅಂತೂ ಇಲ್ಲವಲ್ಲ? ಸಮಯಾನುಸಾರ ಶಕ್ತಿಗಳು ಉಪಯೋಗ ಆಗುತ್ತದೆಯೊ ಅಥವಾ ನಂತರ ಬರುತ್ತದೆಯೋ? ಮಾಸ್ಟರ್ ಸರ್ವಶಕ್ತಿವಾನ್ ಸೀಟಿನ ಮೇಲೆ ಇದ್ದರೆ ಶಕ್ತಿಗಳು ಆಜ್ಞೆಯನ್ನು ಒಪ್ಪಲಿಲ್ಲ - ಎನ್ನುವ ಮಾತಿಲ್ಲ.

ಸೀಟ್ ಬಿಟ್ಟು ಕೆಳಗೆ ಇಳಿದು ಆಜ್ಞೆ ಮಾಡಿದರೆ ಅವು ಒಪ್ಪುವುದಿಲ್ಲ. ಲೌಕಿಕದಲ್ಲಿಯೂ ಯಾರಾದರು ಕುರ್ಚಿಯಿಂದ ಇಳಿದ ಮೇಲೆ ಆಜ್ಞೆ ಮಾಡಿದರೆ ಯಾರೂ ಒಪ್ಪುವುದಿಲ್ಲ. ಶಕ್ತಿಗಳು ನಿಮ್ಮ ಆಜ್ಞೆಯನ್ನು ಒಪ್ಪದಿದ್ದರೆ ನೀವು ನಿಮ್ಮ ಸ್ಥಾನದಿಂದ ಕೆಳಗೆ ಅವಶ್ಯ ಬಂದಿರುತ್ತೀರಿ. ಆದ್ದರಿಂದ ಸದಾ ಮಾಸ್ಟರ್ ಸರ್ವಶಕ್ತಿವಂತನ ಸೀಟಿನಲ್ಲಿ ಸೆಟ್ ಆಗಿರಿ. ಸದಾ ಅಚಲ ಅಡೋಲ ಆಗಿರಿ. ಏರುಪೇರಿನಲ್ಲಿ ಬರುವವರು ಅಲ್ಲ. ಬಾಪ್‌ದಾದಾ ಹೇಳುತ್ತಾರೆ ಶರೀರ ಹೋದರೂ ಚಿಂತೆ ಇಲ್ಲ ಆದರೆ ಖುಷಿ ಹೋಗಬಾರದು. ಹಣವಂತೂ ಅದರ ಮುಂದೆ ಏನೂ ಅಲ್ಲ. ಯಾರ ಬಳಿ ಖುಷಿಯ ಖಜಾನೆ ಇದೆ ಅವರ ಮುಂದೆ ಯಾವ ಮಾತೂ ದೊಡ್ಡದಲ್ಲ ಮತ್ತು ಬಾಪ್‌ದಾದಾ ಸದಾ ಸಹಯೋಗಿ ಸೇವಾಧಾರಿ ಮಕ್ಕಳ ಜೊತೆಯಲ್ಲಿರುವರು. ಮಗು ತಂದೆಯ ಜೊತೆ ಇರುವಾಗ ದೊಡ್ಡ ಮಾತು ಯಾವುದು? ಆದ್ದರಿಂದ ಹೆದರುವ ಮಾತು ಇಲ್ಲ. ತಂದೆ ಇರುವಾಗ ಮಕ್ಕಳಿಗೆ ಯಾವ ಚಿಂತೆ ಇದೆ. ತಂದೆ ಅಂತೂ ಭರಪೂರ್ ಆಗಿರುವರು. ಯಾವುದಾದರೂ ಯುಕ್ತಿಯಿಂದ ಮಕ್ಕಳ ಪಾಲನೆ ಮಾಡಲೇಬೇಕಾಗಿದೆ. ಆದ್ದರಿಂದ ನಿಶ್ಚಿಂತ, ದುಃಖಧಾಮದಲ್ಲಿ ಸುಖಧಾಮದ ಸ್ಥಾಪನೆ ಮಾಡುತ್ತಿರುವಿರಿ ಅಂದ ಮೇಲೆ ದುಃಖಧಾಮದಲ್ಲಿ ಏರುಪೇರಂತೂ ಆಗಿಯೇ ಆಗುತ್ತದೆ. ಬೇಸಗೆ ಕಾಲದಲ್ಲಿ ಸೆಕೆ ಆಗುವುದಲ್ಲವೇ! ಆದರೆ ತಂದೆಯ ಮಕ್ಕಳು ಸದಾ ಸುರಕ್ಷಿತವಾಗಿರುವರು. ಏಕೆಂದರೆ ತಂದೆಯ ಜೊತೆ ಇದ್ದೀರಿ.

**ಸರ್ವ ಮಕ್ಕಳ ಪ್ರತಿ ಬಾಪ್‌ದಾದಾರವರ ಸಂದೇಶ.**

ಸರ್ವ ತಪಸ್ವೀ ಮಕ್ಕಳ ಪ್ರತಿ ನೆನಪು ಪ್ರೀತಿ. ನೋಡಿ ಮಕ್ಕಳೇ, ಸಮಯದ ಸಮಾಚಾರವನು ಕೇಳುತ್ತಾ ಶ್ರೇಷ್ಠಾತಿ ಶ್ರೇಷ್ಠ ಸಾಕ್ಷೀತನದ ಆಸನದಲ್ಲಿ ಮತ್ತು ನಿಶ್ಚಿಂತ ಚಕ್ರವರ್ತಿಯ ಸಿಂಹಾಸನದಲ್ಲಿ ಕುಳಿತು ಎಲ್ಲಾ ಆಟ ನೋಡುತ್ತಿರುವಿರಿ ಅಲ್ಲವೇ? ಈ ಬ್ರಾಹ್ಮಣ ಜೀವನದಲ್ಲಿ ಸ್ವಪ್ನದಲ್ಲಿಯೂ ಹೆದರುವ ಸಂಕಲ್ಪ ಬರಲು ಸಾಧ್ಯವಿಲ್ಲ. ಇದಂತೂ ತಪಸ್ಯಾ ವರ್ಷದಲ್ಲಿ ಲಗನ್‌ನಿನ ಅಗ್ನಿಯಲ್ಲಿ ಬೇಹದ್‌ನ ವೈರಾಗ್ಯ ವೃತ್ತಿಯನ್ನು ಪ್ರಜ್ವಲಿತ ಮಾಡಲು ಗಾಳಿ ಹಾಕಲಾಗುತ್ತಿದೆ. ನೀವು ತಂದೆ ಸಮಾನ ಆಗುವ ಸಂಕಲ್ಪ ಮಾಡಿದಿರಿ ಅರ್ಥಾತ್ ವಿಜಯದ ಬವುಟ ಹಾರಿಸುವ ಯೋಜನೆ ಮಾಡಿದಿರಿ, ಅಂದ ಮೇಲೆ ಇನ್ನೊಂದು ಕಡೆ ಸಮಾಪ್ತಿಯ ಹಲ್ ಚಲ್ ಸಹ ಜೊತೆ ಜೊತೆಯಲ್ಲಿ ನಿಗದಿ ಆಗಿದೆ ಅಲ್ಲವೇ? ರಿಹರ್ಸಲ್ ಸಹ ಡ್ರಾಮಾದ ರೀಲನ್ನು ಸಮಾಪ್ತಿ ಮಾಡುವ ಸಾಧನ ಆಗಿದೆ. ಆದ್ದರಿಂದ ಯಾವುದೂ ಹೊಸದಲ್ಲ.

ಸಮಯದ ಪರಿಸ್ಥಿತಿ ಪ್ರಮಾಣ ಬಂದು ಹೋಗುವುದರಲ್ಲಿ ಅಥವಾ ಯಾವುದಾದರೂ ವಸ್ತು ಸಿಗುವುದರಲ್ಲಿ ಸೆಣಸಾಟ ಆದರೂ ಮನಸ್ಸಿನ ಸಂಕಲ್ಪದಲ್ಲಿ ಎಂದೂ ಸೆಣಸಾಟ ಆಗಬಾರದು. ಎಂತಹ ಪರಿಸ್ಥಿತಿಯಲ್ಲಿರಲಿ ದಿಲ್‌ಖುಷ್ ಮಿಠಾಯಿ ತಿನ್ನುತ್ತಿರಿ. ಖುಷಿಯಿಂದ ಇರಿ, ಫರಿಶ್ತೆಗಳಂತೆ ಹಾರುತ್ತಿರಿ. ಜೊತೆ-ಜೊತೆಗೆ ಇಂತಹ ಸಮಯದಲ್ಲಿ ಪ್ರತಿ ಸೆಂಟರ್ ನಲ್ಲಿ ತಪಸ್ಸಿನ ಕಾರ್ಯಕ್ರಮ ನಡೆಯುತ್ತಿರಲಿ. ಯಾರು ಎಷ್ಟು ಹೆಚ್ಚು ಸಮಯ ತೆಗೆಯಲು ಸಾಧ್ಯ ಅಷ್ಟು ಶಾಂತಿಯ ಸಹಯೋಗ ಕೊಡಿ.

ಒಳ್ಳೆಯದು. ಓಂ ಶಾಂತಿ.

ರಿವೈಸ್ ಕೋರ್ಸ್ 18-01-1991.

***ವಿಶ್ವಕಲ್ಯಾಣಕಾರಿಯಾಗಲು ಸರ್ವಸ್ಮೃತಿಗಳಿಂದ ಸಂಪನ್ನವಾಗಿ ಸರ್ವರಿಗೂ ಸಹಯೋಗವನ್ನು ಕಕೊಡಿ***

ಸ್ಮೃತಿ ದಿನದಂದು ಕೇವಲ ಬ್ರಹ್ಮಬಾಬಾರವರನ್ನೇ ನೆನಪು ಮಾಡುತ್ತಿದ್ದೀರಾ ಅಥವಾ ಬ್ರಹ್ಮಾ ತಂದೆಯಿಂದ ಬಾಬಾ ಯಾವ ಸ್ಮೃತಿಯನ್ನು ಕೊಟ್ಟಿದ್ದಾರೆಯೋ ಅಥವಾ ಎಷ್ಟು ಸ್ಮೃತಿಗಳನ್ನು ಮಾಡಿಸಿದ್ದಾರೆಯೋ ಅಷ್ಟೂ ಜ್ಞಾಪಕವಿದೆಯೇ? ಆದಿಯಿಂದ ಇಲ್ಲಿಯವರೆಗೆ ಯಾವ ಯಾವ ಮತ್ತು ಎಷ್ಟು ಸ್ಮೃತಿಗಳನ್ನು ಕೊಟ್ಟಿದ್ದಾರೆಯೋ ನೆನಪಿದೆಯೇ? ಸ್ಮೃತಿ ಅರ್ಥಾತ್ ಕೇವಲ ರಿಪೀಟ್

ಮಾಡುವುದಲ್ಲ ನಾಮ, ರೂಪ, ಗುಣಗಳು, ಆದಿ, ಅನಾದಿ ಮತ್ತು ಈಗಿನ ಬ್ರಾಹ್ಮಣ ಜೀವನದ ಸರ್ವ ಗುಣಗಳ ಸ್ಮೃತಿ ಸ್ವರೂಪವಾಗುವುದು. ಬ್ರಾಹ್ಮಣ ಆತ್ಮರಾದ ನಿಮ್ಮೆಲ್ಲರ ಕರ್ತವ್ಯವೇನೆಂದರೆ, ನಿಮ್ಮ ಶಾಂತಿಯ ಶಕ್ತಿಯಿಂದ ಅಶಾಂತ ಆತ್ಮರಿಗೆ ಶಾಂತಿಯ ಕಿರಣಗಳನ್ನು ಕೊಡುವುದು ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ಮೃತಿಯ ಅನುಭವವನ್ನು ಮಾಡಿಕೊಂಡಿರುವ ಸ್ಮೃತಿ ಸ್ವರೂಪ.

2. ನಾನು ತಂದೆಯ ನಯನಗಳ ಪ್ರಕಾಶ ಮತ್ತು ನಯನ ರತ್ನವಾಗಿದ್ದೇನೆ.

3. ನಾನು ನಾಮ, ರೂಪ, ಗುಣಗಳು, ಆದಿ, ಅನಾದಿ ಮತ್ತು ಈಗಿನ ಬ್ರಾಹ್ಮಣ ಜೀವನದ ಸರ್ವ ಗುಣಗಳ ಸ್ಮೃತಿ ಸ್ವರೂಪ.

4. ನಾನು ಅನಾದಿ, ಆದಿ ದೇಶದ ಸ್ಮೃತಿಯಿಂದ ಮನೆಗೆ ಹೋಗುವ ಸಮರ್ಥತೆ, ರಾಜ್ಯದಲ್ಲಿ ರಾಜ್ಯಾಧಿಕಾರಿಯಾಗುವ ಧೈರ್ಯ ಬಂದಿತು. ಸಂಗಮಯುಗೀ ಬ್ರಾಹ್ಮಣ ಜೀವನದಲ್ಲಿ ಸುಖಮಯವಾಗಿ, ಸಂತೋಷದಿಂದ ಜೀವಿಸುವ ಕಲೆಯಲ್ಲಿ ಹಾರುತ್ತಾ ಇದ್ದೇನೆ.

5. ನಾನು "ಶಿವತಂದೆಯ ಜೊತೆಯೇ ಇರುತ್ತೇನೆ, ಜೊತೆಯೇ ಹೋಗುತ್ತೇನೆ" ಎಂಬ ಪ್ರತಿಜ್ಞೆಯನ್ನು ಮಾಡಿ ಬ್ರಹ್ಮಾ ತಂದೆಯ ಸಮಾನವಾಗಿ ಫರಿಶ್ತಾ ನಿಂದ ದೇವತೆಯಾಗಿದ್ದೇನೆ.

6. ನಾನು ಸದಾ ತಂದೆಯ ಹೃದಯಕ್ಕೆ ಜೊತೆಯಾಗಿ, ಸೇವೆಯಲ್ಲಿ ಜೊತೆಯಾಗಿ ಮತ್ತು ಸ್ಥಿತಿಯಲ್ಲಿ ಸದಾ ಸಾಕ್ಷಿಯಾಗಿ ಇರುತ್ತಾ ಮಾಯಾಜೀತ್ ನ ಪತಾಕೆಯನ್ನು ಹಾರಿಸಿದ್ದೇನೆ.

7. ನಾನು ಕಲ್ಪಪೂರ್ವದ ಸ್ಮೃತಿಯಲ್ಲಿ ತ್ರಿಕಾಲದರ್ಶಿಯಾಗಿರುತ್ತಾ ಅಶಾಂತ ಆತ್ಮರಿಗೆ ಶಾಂತಿಯ ಕಿರಣಗಳ ಸಹಯೋಗವನ್ನು ಕೊಡುವ ಬ್ರಾಹ್ಮಣ ಆತ್ಮನಾಗಿದ್ದೇನೆ.